ನನ್ನ ಓದು

# ನಿತ್ಯ ಪ್ರಯಾಣಕ್ಕೆ ನಿಲುಗಡೆಯೇ ಇಲ್ಲದ ಕಾಲುದಾರಿ



**ಶಿವಣ್ಣ ಕೆಂಸಿ**

ಕತ್ತಲೆಯಲ್ಲಿ ಕನ್ನವಿಕ್ಕಿದಡೆ
ಎನಗೆ ಕತ್ತಿಯ ಕೊಟ್ಟ ಕರ್ತೃವಿಗೆ ಭಂಗ.
ಅವರು ಮರೆದಿರ್ದಲ್ಲಿ ಮನೆಯ ಹೊಕ್ಕಡೆ
ಎನ್ನ ಚೋರತನದ ಅರಿಕೆಗೆ ಭಂಗ.
ಮರೆದಿರ್ದವರ ಎಬ್ಬಿಸಿ ಅವರಿಗೆ
ಅವರೊಡವೆಯ ತೋರಿ
ಎನ್ನೊಡವೆಯ ತಂದೆ ಮಾರನ ವೈರಿ ಮಾರೇಶ್ವರಾ
– ಕನ್ನದ ಮಾರಿತಂದೆ

ಕೃಷ್ಣಮೂರ್ತಿ ಹನೂರು ಕನ್ನಡದ ಬಹುಮುಖ್ಯ ವಿದ್ವಾಂಸರು ಮತ್ತು ಬರಹಗಾರರು. ಇವರ ಬರವಣಿಗೆಯ ಶೈಲಿ ಓದುಗರಲ್ಲಿ ಆಪ್ತತೆಯನ್ನು ಉಂಟುಮಾಡುವಂತಹದ್ದು; ಎಲ್ಲಿಯೂ ಕೂಡ ಓದುಗರನ್ನು ಬಿಟ್ಟುಕೊಡದೆ ಬುದ್ಧಿ ಮತ್ತು ಭಾವಲೋಕಕ್ಕೆ ಹತ್ತಿರವಾಗುವಂತಹದ್ದು. ಐತಿಹಾಸಿಕ, ಪುರಾಣ, ಸಾಮಾಜಿಕ ವಸ್ತುಗಳನ್ನು ತಮ್ಮ ಸಾಹಿತ್ಯದ ವಸ್ತುಗಳನ್ನಾಗಿಸಿಕೊಂಡು, ವಿಶಿಷ್ಟ ಶೈಲಿಯ ನಿರೂಪಣಾ ಕ್ರಮದೊಂದಿಗೆ ಓದುಗ ಲೋಕಕ್ಕೆ ಕೃಷ್ಣಮೂರ್ತಿ ಹನೂರು ಅವರು ಸದಾ ಎದುರುಗೊಳ್ಳುತ್ತಾರೆ. ಈ ಸೃಜನಶೀಲ ಅನುಸಂಧಾನಕ್ಕೆ ಅವರ ಇತ್ತೀಚಿನ ಕಾದಂಬರಿ 'ಕನ್ನಮರಿ'ಯೂ ಹೊರತಲ್ಲ.

ಹನೂರರು ತಮ್ಮ ಕಾದಂಬರಿಯನ್ನು ಹತ್ತು ಶೀರ್ಷಿಕೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಪ್ರತಿಯೊಂದು ಶೀರ್ಷಿಕೆಯ ಹಿಂದಿನ ಐತಿಹ್ಯ, ವಾಸ್ತವ ಪ್ರಸಂಗಗಳು ಓದುಗರ ಗಮನ ಸೆಳೆಯುತ್ತವೆ ಮತ್ತು ಮಂತ್ರಮುಗ್ಧತೆಯಿಂದ ಓದಿಸಿಕೊಳ್ಳುತ್ತವೆ.

'ಕನ್ನಮರಿ' ಕಾದಂಬರಿಯು ಇಂದಿನ ಸಾಮಾಜಿಕ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಈ ಕಾದಂಬರಿಯಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿನ ವಿಚಾರಗಳನ್ನು ಕಾದಂಬರಿಯ ನಾಯಕ ಎದುರುಗೊಳ್ಳುವ ರೀತಿ, ನಿಭಾಯಿಸುವ ವಿಧಾನ ಮುಖ್ಯವಾದುದು. ಇಂದು ಯಾವುದೇ ಕ್ಷೇತ್ರವೂ ತನ್ನ ಪ್ರಾಮಾಣಿಕತೆ ಮತ್ತು ಸಾಚಾತನವನ್ನು ಉಳಿಸಿಕೊಂಡಿಲ್ಲದಿರುವ ಕಾರಣದಿಂದಾಗಿ, ಹನೂರರ ಕಾದಂಬರಿಯು ಎತ್ತುವ ಪ್ರಶ್ನೆಗಳಿಗೆ ವಿಶೇಷ ಮಹತ್ವ ಪ್ರಾಪ್ತಿಯಾಗಿದೆ. ಕಾದಂಬರಿಯ ನಾಯಕ ಕನ್ನಮಾರಿ ಕುಲದವನಾದರೂ ಎಂದೂ ಕದ್ದವನಲ್ಲ. ತನ್ನ ಕುಲಮೂಲ ಕಸುಬು ಕನ್ನಮರಿಗೆ ಎಂದೂ ಅಡ್ಡಿಬಂದಿಲ್ಲ. ಸಮಾಜವನ್ನು ಎದುರುಗೊಂಡಾಗ ಕನ್ನಮರಿಯ ಮನಸ್ಸಿನಲ್ಲಿ ತನ್ನ ಕುಲ ಕಸುಬಿನ ಬಗೆಗೆ ಒಂದು ರೀತಿಯ ಆತಂಕ ಇತ್ತು; ಈ ಸಮಾಜ ಎಲ್ಲಿ ನನ್ನನ್ನು ಅನುಮಾನಿಸುವುದೋ ಎಂದು.

ಕಾನುಮಡುವಿನ ಸಹಜ, ಪ್ರಶಾಂತ ಮತ್ತು ನಿಷ್ಕಲ್ಮಶವಾದ ವಾತಾವರಣದಿಂದ ಪ್ರಾರಂಭವಾಗಿ, ನಗರ ಪ್ರದೇಶದ ನಾಜೂಕುತನದ ಕಲ್ಮಶದವರೆಗೆ ಕಾದಂಬರಿ ತನ್ನ ಬಾಹುಗಳನ್ನು ಚಾಚಿಕೊಂಡಿದೆ. ಕಾಡು